# ನೋಡಿದಷ್ಟೂ ಒಡಿಶಾ!



ಒಡಿಶಾದ ಕಲೆ–ಸಂಪ್ರದಾಯ, ಜನಜೀವನದ ಹೆಜ್ಜೆ ಗುರುತುಗಳಂತಿರುವ ಎರಡು ಸಂಗ್ರಹಾಲಯಗಳು ವಿಶಿಷ್ಟ ಕಲಾ ಪ್ರಪಂಚವೊಂದನ್ನು ಸಹೃದಯರಿಗೆ ಪರಿಚಯಿಸುತ್ತವೆ.

■ ಗೀತಾ ಕುಂದಾಪುರ

ಭಾಷೆ, ಕಲೆ, ಜಾನಪದ, ಸಂಸ್ಕೃತಿ, ಸಂಪ್ರದಾಯದ ಬಗ್ಗೆ ಹೇಳ ಹೊರಟರೆ ಭಾರತದಲ್ಲಿ ಕಾಣಸಿಗುವಷ್ಟು ವೈವಿಧ್ಯ ಬೇರೆಲ್ಲೂ ಸಿಗದು. ರಾಜ್ಯದಿಂದ ರಾಜ್ಯಕ್ಕೆ ಭಿನ್ನತೆ ಕಂಡರೂ ಅದರದ್ದೇ ಆದ ವಿಶಿಷ್ಟತೆ ಇದೆ, ಸೊಗಡಿದೆ ಹಾಗೂ ಏನೆಲ್ಲ ವೈವಿಧ್ಯವನ್ನು ಯಾವುದೋ ಎಳೆಯೊಂದರಲ್ಲಿ ಒಟ್ಟುಗೂಡಿಸುವ ಮಾಂತ್ರಿಕತೆಯೂ ಇದೆ.

ಇತ್ತೀಚೆಗೆ ಒಡಿಶಾದ ಪುರಿ ಜಗನ್ನಾಥ ದೇವಾಲಯ ಮತ್ತು ಕೊನಾರ್ಕದ ಸೂರ್ಯ ದೇವಾಲಯಕ್ಕೆ ಭೇಟಿ ಕೊಡುವ ಯೋಜನೆ ಹಾಕಿಕೊಂಡಾಗ, ರಾಜಧಾನಿ ಭುವನೇಶ್ವರದಲ್ಲಿರುವ 'ಒರಿಸ್ಸಾ ಸ್ಟೇಟ್ ಮ್ಯೂಸಿಯಂ' ಕಾರ್ಯಕ್ರಮದಲ್ಲಿ ಜಾಗ ಮಾಡಿಕೊಂಡಿತು. ಹಾಗೆಯೇ ಸಮಯವಿತ್ತೆಂದು ನೋಡಿದ್ದು 'ಕಲಾಭೂಮಿ ಮ್ಯೂಸಿಯಂ'. ಹೆಚ್ಚೇನೂ ಅಪೇಕ್ಷೆ ಇಲ್ಲದೆ ಸಂಗ್ರಹಾಲಯವೆರಡನ್ನು ಸಂದರ್ಶಿಸಿದಾಗ ಸಿಕ್ಕಿದ್ದು ಜ್ಞಾನದ ಭಂಡಾರ, ಇತಿಹಾಸದ ಹೆಜ್ಜೆ ಗುರುತುಗಳು, ಸಂಸ್ಕೃತಿಯ ಪರಿಚಯ. ಅದರೊಂದಿಗೆ ಅಪರಿಮಿತ ಸಂತೋಷ.

## ವಾಸ್ತುಶಿಲ್ಪದ ನೆಲೆ ಸ್ಟೇಟ್ ಮ್ಯೂಸಿಯಂ

ಇಬ್ಬರು ಪ್ರಾಧ್ಯಾಪಕರ ವಾಸ್ತುಶಿಲ್ಪದ ಕುರಿತ ಅದಮ್ಯ ಪ್ರೀತಿ, ಅವರ ಪ್ರಯತ್ನ ಮತ್ತು ಪುಟ್ಟ ಸಂಗ್ರಹ ಈಗ ರಾಜ್ಯಮಟ್ಟದ ದೊಡ್ಡ ಸಂಗ್ರಹಾಲಯವಾಗಿ ತಲೆ ಎತ್ತಿ ನಿಂತಿದೆ.

ನಡೆದದ್ದು ಇಷ್ಟು: ಪ್ರೊ. ಎನ್.ಸಿ. ಬ್ಯಾನರ್ಜಿ ಮತ್ತು ಪ್ರೊ. ಘನಶ್ಯಾಮ್ ದಾಸ್ ಕಟಕ್‌ನ ರಾವೆನ್ಶಾ ವಿಶ್ವವಿದ್ಯಾಲಯದ ಪ್ರೊಫೆಸರುಗಳು. ಸಮಾಜ–ಸಂಸ್ಕೃತಿಯ ಬಗ್ಗೆ ಆಸಕ್ತರಾಗಿದ್ದ ಇವರು, 1932ರಲ್ಲಿ ಕಾಲೇಜು ಆವರಣದಲ್ಲೇ ಪುಟ್ಟ ವಾಸ್ತುಶಿಲ್ಪಗಳ ಸಂಗ್ರಹಾಲಯವನ್ನು ಸ್ಥಾಪಿಸಿದರು. 1938ರಲ್ಲಿ ಕಾಲೇಜು ಆವರಣದಲ್ಲಿದ್ದ ಸಂಗ್ರಹಾಲಯವನ್ನು ದೊಡ್ಡ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು, ಅದರ ಉಸ್ತುವಾರಿಗಾಗಿ ಸಮಿತಿ ಸ್ಥಾಪಿಸಲಾಯಿತು. 1947–48ರಲ್ಲಿ ಒಡಿಶಾದ ರಾಜಧಾನಿಯು ಕಟಕ್‌ನಿಂದ ಭುವನೇಶ್ವರಕ್ಕೆ ಬದಲಾಗುತ್ತಿದ್ದಂತೆ ಸಂಗ್ರಹಾಲಯದ ಸ್ಥಳವೂ ಬದಲಾಯಿತು.

ಮೊದಲಿಗೆ ಸಂಗ್ರಹಾಲಯದಲ್ಲಿ ಪುರಾತನ ಕಲ್ಲಿನ, ಮಣ್ಣಿನ ಮೂರ್ತಿಗಳು, ಹಿತ್ತಾಳೆ ಫಲಕಗಳು ಮತ್ತು ನಾಣ್ಯಗಳು ಮಾತ್ರ ಇದ್ದವಂತೆ. ಈಗ ನಾಲ್ಕಂತಸ್ತಿನ ದೊಡ್ಡ ಕಟ್ಟಡದಲ್ಲಿರುವ ಸಂಗ್ರಹಾಲಯದಲ್ಲಿ ಇತಿಹಾಸ, ಶಸ್ತ್ರಾಗಾರ, ಗಣಿಗಾರಿಕೆ ಮತ್ತು ಭೂ ವಿಜ್ಞಾನ, ವಾಸ್ತುಶಿಲ್ಪ, ಮಾನವಶಾಸ್ತ್ರ, ಹಸ್ತಪ್ರತಿ, ಗ್ರಂಥಾಲಯ, ಕರಕುಶಲ ಕಲೆ, ಶಿಲಾಶಾಸನ ಮತ್ತು ನಾಣ್ಯಶಾಸ್ತ್ರ, ಗ್ರಂಥಾಲಯ ಹೀಗೆ ಹಲವಾರು ವಿಭಾಗಗಳಿವೆ.

'ವಾಸ್ತುಶಿಲ್ಪ ವಿಭಾಗ'ದಲ್ಲಿ ಅತಿ ಹೆಚ್ಚು ಸಂಗ್ರಹಗಳಿವೆ. ಅದರಲ್ಲೇ ಹಲವು ವಿಭಾಗಗಳಿವೆ. ಬುದ್ಧ, ಮಹಾವೀರ, ಶೈವ, ವೈಷ್ಣವ, ಗಣೇಶ, ಶಕ್ತಿ ದೇವತೆಗಳಿಗೆ ಸಂಬಂಧಿಸಿದ ಕಲ್ಲಿನ ಮೂರ್ತಿಗಳನ್ನು ಬೇರೆ ಬೇರೆ ವಿಭಾಗಗಳಲ್ಲಿಟ್ಟಿದ್ದಾರೆ. ಹೆಚ್ಚಿನವು ಭಗ್ನಗೊಂಡಿವೆ. ಶಿಲ್ಪಗಳು ಕ್ರಿ.ಪೂ. 3ನೇ ಶತಮಾನದಿಂದ ಕ್ರಿ.ಶ. 13ನೇ ಶತಮಾನದವರೆಗಿನವು. 'ಶಸ್ತ್ರಾಗಾರ ವಿಭಾಗ'ದಲ್ಲಿ ಕತ್ತಿ, ಗುರಾಣಿ, ಬಂದೂಕು, ಫಿರಂಗಿಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. 'ನೈಸರ್ಗಿಕ ಇತಿಹಾಸ ವಿಭಾಗ' ಅತ್ಯಂತ ಆಕರ್ಷಕ. ತೊಗಲಿನೊಳಗೆ ಕೃತಕ ವಸ್ತುಗಳನ್ನು ತುಂಬಿಸಿದ (ಸ್ಟಫ್ಡ್) ಪ್ರಾಣಿಗಳು, ಹಕ್ಕಿಗಳು, ಸಸ್ತನಿಗಳನ್ನು ಕಾಡಿನ ಸಹಜ ವಾತಾವರಣವನ್ನು ಸೃಷ್ಟಿಸಿ ಪ್ರದರ್ಶನಕ್ಕಿಟ್ಟಿದ್ದಾರೆ. ಬಂಗಾಳದ ಬಿಳಿ ಹುಲಿ, ಸಿಂಹ, ಕಾಡೆಮ್ಮೆ, ಚಿರತೆ, ಜಿಂಕೆಗಳು ಇಲ್ಲಿರುವ ಮಾದರಿ ಪ್ರಾಣಿಗಳು. ಪ್ರಾಣಿ ಸಂಕುಲನವನ್ನು ಬಿಂಬಿಸುವ ಈ ಗ್ಯಾಲರಿ ಹೊಕ್ಕರೆ ವಾಪಸ್ಸು ಬರಲು ಮನಸ್ಸು ಬಾರದು.

ಮತ್ತೊಂದು ಗಮನಸೆಳೆಯುವ ಗ್ಯಾಲರಿ 'ಹಸ್ತಪ್ರತಿ ವಿಭಾಗ'ದ್ದು. ಇಲ್ಲಿ ಸುಮಾರು 40



